# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## 32ನೇ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ಹಾಗೂ 2019ನೇ ಸಾಲಿನ 4ನೇ ಸಭೆಯ ನಡಾವಳಿಗಳು

ದಿನಾಂಕ : ಗುರುವಾರ 12-12-2019

ಸಮಯ : ಮಧ್ಯಾಹ್ನ 12 : 00 ಘಂಟೆ

ಸ್ಥಳ : ಕುವೆಂಪು ಸಭಾಂಗಣ, ರಾ.ಚ.ವಿ.ವಿ.ಬೆ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ 32ನೇ ಸಾಮಾನ್ಯ ಸಭೆಯು** ದಿನಾಂಕ **12 ಡಿಸೆಂಬರ್ 2019** ರಂದು **ಮಧ್ಯಾಹ್ನ 12.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಎಮ್. ಎನ್. ಮಾವಿನಕಟ್ಟಿ | ಸದಸ್ಯರು |
| 3. | ಡಾ. ವ್ಹಿ. ಬಿ. ಗ್ರಾಮಪುರೋಹಿತ | ಸದಸ್ಯರು |
| 4. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 5. | ಪ್ರೊ. ಜೆ.ಎಸ್. ಚಿಟ್‌ಕೂರ | ಸದಸ್ಯರು |
| 6. | ಡಾ. ಎಸ್.ಸಿ.ಮಠಪತಿ | ಸದಸ್ಯರು |
| 7. | ಡಾ. ಎಂ.ಹೆಚ್ ಚಲವಾಡಿ | ಸದಸ್ಯರು |
| 8. | ಶ್ರೀಮತಿ. ಮೃನಾಲಿನಿ ಪಟ್ಟನ | ಸದಸ್ಯರು |
| 9. | ಪ್ರೊ. ಎಚ್.ವೈಯ್. ಕಾಂಬಳೆ | ಸದಸ್ಯರು |
| 10. | ಪ್ರೊ.(ಶ್ರೀಮತಿ) ಮನಿಶಾ ನೇಸರಕರ | ಸದಸ್ಯರು |
| 11. | ಪ್ರೊ. ಎಸ್.ಸಿ. ಪಾಟೀಲ | ಸದಸ್ಯರು |
| 12. | ಪ್ರೊ. ವಾಯ್.ಎಸ್. ಬಲವಂತಗೊಳ | ಸದಸ್ಯರು |
| 13. | ಪ್ರೊ. ಕೆ.ಎಲ್.ಎನ್. ಮೂರ್ತಿ | ಸದಸ್ಯರು |
| 14. | ಪ್ರೊ. ಡಿ.ಎನ್.ಪಾಟೀಲ | ಸದಸ್ಯರು |
| 15. | ಪ್ರೊ. ವ್ಹಿ.ಬಿ. ಅವಟಿ | ಸದಸ್ಯರು |
| 16. | ಪ್ರೊ. ವ್ಹಿ. ಎಂ. ಬಂಕಾಪೂರ, (ಗ್ರಂಥಪಾಲರು) | ಸದಸ್ಯರು |
| 17. | ಪ್ರೊ. ಕೆ.ಬಿ.ಚಂದ್ರಿಕಾ, ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ | ಸದಸ್ಯರು |
| 18. | ಪ್ರೊ. ಎಚ್.ವೈಯ್. ಕಾಂಬಳೆ, (ಯೋ.ಮೇ.ಮೌ ಮಂಡಳಿ) | ಸದಸ್ಯರು |
| 19. | ಪ್ರೊ. ಎಸ್.ಎಂ. ಹುರಕಡ್ಲಿ, ನಿರ್ದೇಶಕರು, ಸಿ.ಡಿ.ಸಿ. | ಸದಸ್ಯರು |
| 20. | ಪ್ರೊ. ಡಿ.ಎನ್.ಪಾಟೀಲ **(ಹಣಕಾಸು ಅಧಿಕಾರಿಗಳು)** | ಸದಸ್ಯರು |
| 21. | ಪ್ರೊ. ಅಶೋಕ ಡಿಸೋಜಾ**(ಕುಲಸಚಿವರು(ಮೌಲ್ಯಮಾಪನ)** | ಸದಸ್ಯರು |
| 22. | ಪ್ರೊ. ಬಸವರಾಜ ಪದ್ಮಶಾಲಿ | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು

| | | |
|---|---|---|
| 1. | ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 3. | ಶ್ರೀ. ಅರುಣ ಶಾಹಪೂರ, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 4. | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ, ಸನ್ಮಾನ್ಯ ಶಾಸಕರು | ಸದಸ್ಯರು |
| 5. | ಶ್ರೀ. ಶ್ರೀನಿವಾಸ ಮಾನೆ ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 6. | ಶ್ರೀ. ಸತ್ಯಾನಂದ ಪಟೊಟಿ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156**

## ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ **12 ಡಿಸೆಂಬರ್ 2019** ರಂದು ಜರುಗಿದ ವಿಶ್ವವಿದ್ಯಾಲಯದ **32ನೇ** ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31

2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿ: 29-11-2019
3. ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 29-11-2019

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಭೆಯ ಸರ್ವಸದಸ್ಯರನ್ನು ಸ್ವಾಗತಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯ ಸದಸ್ಯರನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

| ಕ್ರಮ ಸಂಖ್ಯೆ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/12/1 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ಸಭೆಯ ಮುಂದಿಡುವುದು. |
| | ತೀರ್ಮಾನ | **ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ಸಭೆಯು ಅನುಮೋದನೆ ನೀಡಿತು.** |
| 2 | 2019/12/2 | ವಿಶ್ವವಿದ್ಯಾಲಯದ 'AAA' ಸಮಿತಿ ವತಿಯಿಂದ ನಡೆಸಲಾದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪರಿಶೋಧನೆಯ ವರದಿ ಸಭೆಯ ಮುಂದೆ ಮಂಡಿಸುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ 'AAA' ಸಮಿತಿ ವತಿಯಿಂದ ನಡೆಸಲಾದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪರಿಶೋಧನೆಯ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಸಭೆಯು 'AAA' ಸಮಿತಿ ಪರಿಶೋಧನೆಯಲ್ಲಿ ಪಾಲ್ಗೊಂಡ ಎಲ್ಲ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರಶಂಶಿಸಿದರು ಹಾಗೂ ಮುಂದಿನ NAAC ಸಮಿತಿಯು ಭೇಟಿಗಾಗಿ ಎಲ್ಲ ಕಾರ್ಯಗಳನ್ನು ಕೈಕೊಳ್ಳಲು ಸೂಚಿಸಿದರು.** |
| 3 | 2019/12/3 | ವಿಶ್ವವಿದ್ಯಾಲಯಕ್ಕೆ NAAC ಸಮಿತಿಯು ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ಜಮಖಂಡಿ ಹಾಗೂ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದ ದುರಸ್ತಿ ಕಾಮಗಾರಿ ಹಾಗೂ ನವೀಕರಣಕ್ಕಾಗಿ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಪ್ರಸಕ್ತ 2020 ಸಾಲಿನಲ್ಲಿ NAAC ಸಮಿತಿಯು ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಕಟ್ಟಡ, ವಸತಿಗೃಹಗಳು ಹಾಗೂ ವಿವಿಧ ವಿಭಾಗಗಳ ದುರಸ್ತಿ ಕಾಮಗಾರಿ ಹಾಗೂ ನವೀಕರಣಕ್ಕಾಗಿ ಕ್ರಮಕೈಗೊಳ್ಳಲು ಸೂಚಿಸಿತು ಹಾಗೂ ಸ್ನಾತಕೋತ್ತರ ಕೇಂದ್ರಗಳಾದ ವಿಜಯಪುರ ಮತ್ತು ಜಮಖಂಡಿ ಹಾಗೂ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದ ದುರಸ್ತಿ ಕಾಮಗಾರಿ ಹಾಗೂ ನವೀಕರಣಕ್ಕಾಗಿ ಸಭೆಯು ಅನುಮೋದನೆ ನೀಡಿತು. ಸ್ನಾತಕೋತ್ತರ ಕೇಂದ್ರ ವಿಜಯಪುರ ಆವರಣದ ಕಟ್ಟಡ ಕಾಮಗಾರಿ ಹಾಗೂ ನವೀಕರಣಕ್ಕಾಗಿ ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸೂಚಿಸಿತು.** |

| | | |
|---|---|---|
| 4 | 2019/12/4 | ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ. 7ನೇ ವೇತನ ಆಯೋಗದ ಶ್ರೇಣಿಯ ಪರಿನಿಯಮಾವಳಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ. 7ನೇ ವೇತನ ಆಯೋಗದ ಶ್ರೇಣಿಯ ಪರಿನಿಯಮಾವಳಿಗೆ ಸಭೆಯು ಅನುಮೋದನೆ ನೀಡಿತು.** |

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು ಹಾಗೂ ತೀರ್ಮಾನಗಳು**

| ಕ್ರ ಸಂಖ್ಯೆ | ಸಂಖ್ಯೆ | ಕಾರ್ಯ ಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| I | 2019/12/I | 2017–18 ನೇ ಶೈಕ್ಷಣಿಕ ಸಾಲಿನ ಆಡಳಿತ ನಿರ್ವಹಣಾ(ಎಂ.ಬಿ.ಎ.) ವಿಭಾಗದ ಏಳು ವಿದ್ಯಾರ್ಥಿಗಳಿಗೆ 2019–20 ನೇ ಸಾಲಿಗೆ ಪ್ರಥಮ ಸೆಮೆಸ್ಟರ್‌ಗೆ ರೂ. 5000/– ಶುಲ್ಕವನ್ನು ಭರಿಸಿಕೊಂಡು ಮರು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಿದ್ದಕ್ಕಾಗಿ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಆಡಳಿತ ನಿರ್ವಹಣಾ(ಎಂ.ಬಿ.ಎ.) ವಿಭಾಗದ ಏಳು ವಿದ್ಯಾರ್ಥಿಗಳಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಸಕ್ತ ವರ್ಷದ 2019–20ನೇ ಸಾಲಿಗೆ, ರೂ. 5000/–ಗಳ ಶುಲ್ಕವನ್ನು ಭರಿಸಿಕೊಂಡು 1ನೇ ಸೆಮೆಸ್ಟರ್‌ನ ಹಾಜರಾತಿ ಕಡಿಮೆ ಇರುವ ವಿಷಯಗಳ ಬೋಧನಾ ತರಗತಿಗಳಿಗೆ ಹಾಜರಾಗಿ ಪರೀಕ್ಷೆಗಳನ್ನು ನೀಡಲು ಅನುಮತಿ ನೀಡಿದ್ದಕ್ಕಾಗಿ ಸಭೆಯು ಅನುಸಮರ್ಥನೆ ನೀಡಿತು.** |
| II | 2019/12/II | ದಿ ಉಗಾರ ಶುಗರ ವರ್ಕ್ಸ, ಡಾ. ಶಿರಗಾಂವಕರ ಶಿಕ್ಷಣ ಸಂಸ್ಥೆಯ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಉಗಾರ ಖುರ್ದ, ಈ ಮಹಾವಿದ್ಯಾಲಯದ ಎಂ.ಕಾಂ. ಕೋರ್ಸನ್ನು ಸ್ಥಗಿತಗೊಳಿಸುವ ಕುರಿತು. |
| | ತೀರ್ಮಾನ | **ದಿ ಉಗಾರ ಶುಗರ ವರ್ಕ್ಸ, ಡಾ. ಶಿರಗಾಂವಕರ ಶಿಕ್ಷಣ ಸಂಸ್ಥೆಯ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಉಗಾರ ಖುರ್ದ ಇವರ ಕೋರಿಗೆ ಮೇರೆಗೆ, ಅವರ ಮಹಾವಿದ್ಯಾಲಯದ ಎಂ.ಕಾಂ. ಕೋರ್ಸನ್ನು ಸ್ಥಗಿತಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| III | 2019/12/III | ವಿಶ್ವವಿದ್ಯಾಲಯದ ಸ್ನಾತಕ ಸಮಾಜಶಾಸ್ತ್ರ (ಐಚ್ಛಿಕ) ವಿಷಯದ ಅಭ್ಯಾಸ ಮಂಡಳಿ ಅಧ್ಯಕ್ಷರು ಸಲ್ಲಿಸಿರುವ 3,4,5, ಮತ್ತು 6ನೇ ಸೆಮಿಸ್ಟರ್‌ನ ನೂತನ ಪಠ್ಯಕ್ರಮಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಸ್ನಾತಕ ಸಮಾಜಶಾಸ್ತ್ರ (ಐಚ್ಛಿಕ) ವಿಷಯದ ಅಭ್ಯಾಸ ಮಂಡಳಿ ಅಧ್ಯಕ್ಷರು ಸಲ್ಲಿಸಿರುವ 3,4,5, ಮತ್ತು 6ನೇ ಸೆಮಿಸ್ಟರ್‌ನ ನೂತನ ಪಠ್ಯಕ್ರಮಗಳನ್ನು ಅನುಮೋದನೆ ನೀಡಿತು ಹಾಗೂ ಸದರಿ ಪಠ್ಯಕ್ರಮಗಳನ್ನು ಎಲ್ಲ ಸದಸ್ಯರುಗಳಿಗೆ ಇ–ಮೇಲ್ ಮುಖಾಂತರ ಕಳುಹಿಸಲು ಸಭೆಯು ಸೂಚಿಸಿತು.** |
| IV | 2019/12/IV | 2018–19 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **2018–19 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಸಭೆಯು ಅನುಮೋದನೆ ನೀಡಿತು.** |

**ಕೊನೆಯದಾಗಿ ಕುಲಸಚಿವರು(ಮೌ) ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.**

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗೂ ಅಧ್ಯಕ್ಷರು**

**ಇವರಿಗೆ,**

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳಿಗೆ,**

ಪ್ರತಿ ಮಾಹಿತಿಗಾಗಿ :

ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.